ಓಎಸ್ ನಂ ೧೬-೨೦೧೬

ಪಿಡಬ್ಲ್ಯು-1

**ಸಾಕ್ಷಿಯನ್ನು ಇಂದು ದಿನಾಂಕಃ 01-02-2021 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

| | | |
|---|---|---|
| ಹೆಸರು | ಃ | ಉದಯಕುಮಾರ ತಂದೆ ಅಂಬರಪ್ಪ ವಂಕೆ |
| ವಯ | ಃ | 45 ವರ್ಷ, |
| ಉ | ಃ | **ಟೈ**ಲರಿಂಗ ಕೆಲಸ |
| ಸಾ | ಃ | ಅಂಬಲಗಾ |

**ಮುಖ್ಯ ವಿಚಾರಣೆಃ-ವಾದಿ ಪರ ಡಿ ಎಸ್ ಎನ. ವಕೀಲರಿಂದ**

ನಾನು ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆ ಶಪಥ ಪತ್ರವನ್ನು ಸಲ್ಲಿಸುತ್ತಿದ್ದು, ಅದರಲ್ಲಿ ಬರೆದ ವಿಚಾರಗಳು ಸತ್ಯವಾಗಿರುತ್ತವೆ. ಅದನ್ನು ನನ್ನ ಹೇಳಿಕೆಯ ಮೇರೆಗೆ ತಯಾರಿಸಿದ್ದು, ಅದನ್ನು ಓದಿಸಿ ತಿಳಿದುಕೊಂಡು ನಾನು ಅದಕ್ಕೆ ನನ್ನ ಸಹಿ ಹಾಕಿರುತ್ತೇನೆ.

ಈ ಕೆಳಕಂಡ ದಾಖಲಾತಿಗಳನ್ನು ನಾನು ಈ ದಿನ ಹಾಜರುಪಡಿಸುತ್ತಿದ್ದೇನೆ.

ದಿನಾಂಕ 25-08-1999 ರ ಕ್ರಯಪತ್ರ ಹಾಜರುಪಡಿಸಿದ್ದು, ಅದನು ನಿಪಿ-1 ಎಂದು, ಅಂಬಲಗಾ ಗ್ರಾಮ ಪಂಚಾಯವರು ನೀಡಿದ ನಮೂನೆ-13 ನ್ನು ಹಾಜರುಪಡಿಸಿದ್ದು, ಅದನು ನಿಪಿ-2 ಎಂದು, ಕಂದಾಯ ರಶೀದಿಯನ್ನು ಹಾಜರುಪಡಿಸಿದ್ದು , ಅದನು ನಿಪಿ-3 ಎಂದು, ನಮೂನೆ-13 ನ್ನು ಹಾಜರುಪಡಿಸಿದ್ದು, ಅದನು ನಿಪಿ-4 ಎಂದು, ಕಟ್ಟಡ ಪರವಾನಿಗೆಯನ್ನು ಹಾಜರುಪಡಿಸಿದ್ದು, ಅದನು ನಿಪಿ-5 ಎಂದು, ದೃಡೀಕರಣ ಪತ್ರವನ್ನು ಹಾಜರುಪಡಿಸಿದ್ದು, ಅದನು ನಿಪಿ-6 ಎಂದು, 4 ಭಾವಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-7 ರಿಂದ 10 ಎಂದು, ಅದಕ್ಕೆ ಸಂಬಂಧಪಟ್ಟ ಸಿಡಿಯನ್ನು ನಿಪಿ-11 ಎಂದು ಗುರುತಿಸಲಾಯಿತು. ವಾದಪತ್ರದೊಂದಿಗಿನ ಕಚ್ಚಾ ನಕಾಶೆಯನ್ನು ನಿಪಿ-12 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.